ಡಿ .ಡಬ್ಲ್ಯೂ: 1

ದಿನಾಂಕ :14-09-2023 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಎಂ ಎಸ್ ಎನ್ ವಕೀಲರಿಂದಃ

ದಿನಾಂಕ 14-06-1990 ರ ಪಾಲು ಪಟ್ಟಿ ಹಾಜರುಪಡಿಸಿದ್ದು ಅದನ್ನು ನಿಡಿ 1 ಎಂದು , 1 ಎಂ ಆರ್ ಹಾಜರುಪಡಿಸಿದ್ದು ಅದನ್ನು ನಿಡಿ 2 ಎಂದು , ಒಂದು ಆರ್ ಟಿ ಸಿ ಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ 3 ಎಂದು ಗುರುತಿಸಲಾಯಿತು .

ಪಾಟೀ ಸವಾಲುಃ ವಾದಿ ಪರ ಎಸ್ ಆರ್ ವಕೀಲರಿಂದಃ

ಗುಡ್ಡಯ್ಯನ ತಂದೆಯ ಹೆಸರು ರಂಗಪ್ಪ . ರಂಗಪ್ಪನಿಗೆ 3 ಜನ ಮಕ್ಕಳು ಅವರುಗಳೆಂದರೆ ಸಿದ್ದಯ್ಯ , ಭೋರಜೋಗಯ್ಯ , ಗುಡ್ಡಯ್ಯ . ಗುಡ್ಡಯ್ಯನಿಗೆ ಇಬ್ಬರು ಮಕ್ಕಳು ಅವರುಗಳೆಂದರೆ ಜಯರಂಗಪ್ಪ ಮತ್ತು ಸಿದ್ದಯ್ಯ . ಅವರಿಗೆ 4 ಜನ ಹೆಣ್ಣು ಮಕ್ಕಳು ಸಹ ಇದ್ದಾರೆ . ರಂಗಪ್ಪನ ಮಕ್ಕಳು ಸುಮಾರು ವರ್ಷಗಳ ಹಿಂದೆ ಭಾಗ ಆಗಿದ್ದಾರೆ ಎಂದರೆ ಸರಿ . ದಿನಾಂಕ 14-09-1990 ರಲ್ಲಿ ನನ್ನ ತಂದೆ ಮತ್ತು ಜಯರಂಗಪ್ಪ ಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ . ಜಯರಂಗಪ್ಪ ಮತ್ತು ಸಿದ್ದಯ್ಯ ಕೂಡ ದಿನಾಂಕ 26-06-1998 ರಂದು ಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ಆ ಭಾಗದಲ್ಲಿ ವಾದಿಗೆ ಸರ್ವೆ ನಂ 162/2 ರಲ್ಲಿ 2 ಎಕೆರ 20 ಗುಂಟೆ ಸರ್ವೆ ನಂ 159/1 ರಲ್ಲಿ 26 ಗಂಟೆ ಸರ್ವೆ ನಂ 160/8 ರಲ್ಲಿ 1 ಎಕರೆ 31 ಗುಂಟೆ ಬಂದಿದೆ ಎಂದರೆ ಸರಿ . ಈ ಪ್ರಕಾರ ಅವರ ಹೆಸರಿಗೆ ಖಾತೆ ಪಹಣಿ ಬಂದಿದೆ ಎಂದರೆ ಸರಿ . ಈ ಪ್ರಕಾರ ವಾದಿಯವರು ಆ ಆಸ್ತಿಗಳ ಸ್ವಾದೀನದಲ್ಲಿ ಇದ್ದಾರೆ ಎಂದರೆ ಸರಿ . ಅವರ ಒಟ್ಟು ಆಸ್ತಿಯಲ್ಲಿ ತೆಂಗು ಅಡಿಕೆ ಇದೆ ಆದರೆ ಸರ್ವೆ ನಂ 162 ರಲ್ಲಿ ಹುಣಸೆ ಇದೆ . ಸರ್ವೆ ನಂ 162/2 ರ ಪಶ್ಚಿಮಕ್ಕೆ ನಮ್ಮ ಜಮೀನು ಇದೆ ಎಂದರೆ ಸರಿ . ನಾನು ಸರ್ವೆ ನಂ 162/2 ರಲ್ಲಿ ನಾನು ಮತ್ತು ನನ್ನ ತಂದೆ ಒತ್ತುವರಿ ಮಾಡಿದ್ದೇವೆ ಎಂದರೆ ಸರಿಯಲ್ಲ . ಸರ್ವೆ ನಂ 162/2 ಕ್ಕೆ ಸರ್ವೆ ಹದ್ದು ಬಸ್ತು ಮಾಡಲು ವಾದಿಯವರು ಅರ್ಜಿ ಕೊಟ್ಟಿದ್ದರು ಎಂದರೆ ಸರಿ . ಆ ಪ್ರಕಾರ ಸರ್ವೆ ಇಲಾಖೆಯವರು ಆ ಜಮೀನಿನ ಅಕ್ಕ ಪಕ್ಕದವರಿಗೂ ಸಹ ನೋಟಿಸ್ ಕೊಟ್ಟಿದ್ದರು ಎಂದರೆ ಸರಿ . ಆ ನೋಟಿಸ್ ಪ್ರಕಾರ ಅಕ್ಕ ಪಕ್ಕದ ಜಮೀನಿನವರು ಮತ್ತು ನಾನು ಹೋಗಿದ್ದೆ ಎಂದು ಮೊದಲು ಹೌದು ಎಂದು ಹೇಳಿ ನಂತರ ನಾನು ಹೋಗಿಲ್ಲ ಅಂತ ಹೇಳುತ್ತಾರೆ . ಸರ್ವೆ ನಂ 162/2 ರ ಪಶ್ಚಿಮಕ್ಕೆ ದಿಕ್ಕಿನಲ್ಲಿ ನಾವು ಒತ್ತುವರಿ ಮಾಡಿದ್ದಾರೆ ಅಂತ ಸರ್ವೆಯವರು ವರದಿ ಮಾಡಿದ್ದಾರೆ ಎಂದರೆ ಸರಿಯಲ್ಲ . ಈ ವರದಿ ವಿರುದ್ಧ ನಾವು ಡಿ ಡಿ ಎಲ್ ಆರ್ ಅಪೀಲು ಹೋಗಿದ್ದೇವೆ ಎಂದರೆ ಸರಿ . ಡಿ ಡಿ ಎಲ್ ಆರ್ ರಲ್ಲಿ

ನೀನು ಸಿವಿಲ್ ನ್ಯಾಯಾಲಯದಲ್ಲಿ ಇದನ್ನು ಬಗೆಹರಿಸಿಕೊಳ್ಳಿ ಅಂತ ಆದೇಶ ಮಾಡಿದ್ದಾರೆ ಎಂದರೆ ಸರಿಯಲ್ಲ . ಆ ರೀತಿ ಆದೇಶ ವಾಗಿದ್ದರು ಸಹ ಆಗಿಲ್ಲ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಸರ್ವೆ ನಂ 159/1 ರಲ್ಲಿ 5 ಗುಂಟೆ ಸರ್ವೆ ನಂ 160/8 ರಲ್ಲಿ 9 ಗುಂಟೆ ನಾವು ಪೂರ್ವ ದಕ್ಕಿನಲ್ಲಿ ಒತ್ತುವರಿ ಮಾಡಿದ್ದೇವೆ ಎಂದರೆ ಸರಿಯಲ್ಲ . ಸರ್ವೆ ನಂ 159/1 ರಲ್ಲಿ 5 ಗುಂಟೆ ದಕ್ಷಿಣ ಭಾಗದಲ್ಲಿ ಒತ್ತುವರಿ ಮಾಡಿದ್ದೇವೆ ಎಂದರೆ ಸರಿಯಲ್ಲ . ಈ ರೀತಿ ಒತ್ತುವರಿ ಮಾಡಿದ್ದರಿಂದ ಸಿದ್ದಯ್ಯ ಬಂದು ನಮ್ಮ ತಂದೆಯ ಬಳಿ ವಿಚಾರಿಸಿದರು ಎಂದರೆ ಸರಿಯಲ್ಲ . ಈ ಒತ್ತುವರಿ ಜಾಗವನ್ನು ಬಿಟ್ಟುಕೊಡುವಂತ ಸಿದ್ದಯ್ಯ ಅಣ್ಣ ತಮ್ಮಂದಿರು ಚಿಕ್ಕಪ್ಪ ದೊಡ್ಡಪ್ಪಂದಿರು ಕೇಳಿದ್ದರು ಎಂದರೆ ಸರಿಯಲ್ಲ . ರಂಗನಾಥ ನನ್ನ ತಂದೆಯ ಮೊದಲು ಮಗ . ಬೋರಯ್ಯ ಎರಡನೆ ಮಗ . ನಾನು 3 ನೇ ಮಗ . ನಾನು ನನ್ನ ತಂದೆಯ ಜೊತೆ ವಾಸವಿದ್ದೇನೆ ಎಂದರೆ ಬೇರೆ ವಾಸವಾಗಿದ್ದಾರೆ ಆದರೆ ನಾನು ನೋಡಿಕೊಳ್ಳುತ್ತಿದ್ದೇನೆ ಎಂದು ಹೇಳುತ್ತಾರೆ . ನನ್ನ ತಂದೆ ಮತ್ತು ಅಣ್ಣ ತಮ್ಮಂದಿರು ಒತ್ತುವರಿ ಮಾಡಿದ ಜಮೀನನ್ನು ಬಿಟ್ಟುಕೊಡೋಣ ಅಂತ ಹೇಳಿದ್ದರು ಎಂದರೆ ಸರಿಯಲ್ಲ . ನಾನು ಬಿಟ್ಟು ಕೊಡುವುದಿಲ್ಲ ಏನು ಮಾಡಿಕೊಳ್ಳುತ್ತಿರೋ ಮಾಡಿಕೊಳ್ಳಿ ಅಂತ ನಾನೇ ಅವರಿಗೆ ಬೆದರಿಸಿದ್ದೇನೆ ಎಂದರೆ ಸರಿಯಲ್ಲ . ನಾನು ಈಗಲೂ ಕೂಡ ನನ್ನ ಅಣ್ಣಂದಿರರಿಗೆ ಭಾಗ ಕೊಟ್ಟಿಲ್ಲ ಎಂದರೆ ಸರಿಯಲ್ಲ . ಅದಕ್ಕೆ ಸಿದ್ದಯ್ಯ ಬಂದು ನಾಯಾಲಯಕ್ಕೆ ದಾವೆ ಹಾಕಿದ್ದಾರೆ ಎಂದರೆ ಸರಿಯಲ್ಲ . ಆದ್ದರಿಂದ ಸಿದ್ದಯ್ಯ ಒತ್ತುವರಿ ಮಾಡಿದ ಜಾಗವನ್ನು ಬಿಡಿಸಿಕೊಡಿ ಅಂತ ದಾವೆ ಮಾಡಿದ್ದಾರೆ ಎಂದರೆ ಸರಿಯಲ್ಲ . ಪ್ರತಿವಾದ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತು . ದಿನಾಂಕ 14-06-1990 ನೇ ಇಸವಿ ಯ ಪಂಚಾಯತ್ ಪಾಲು ಪಟ್ಟಿ ಪ್ರಕಾರ ನನ್ನ ತಂದೆಗೆ ಸರ್ವೆ ನಂ 162 ರಲ್ಲಿ 5 ಎಕರೆ 20 ಗುಂಟೆ ಬಂದಿದೆ ಎಂದರೆ ಸರಿ . ನಂತರ ಅದು ಸರ್ವೆ ನಂ 162/2 ಎಂದು ಪೋಡು ಆಯಿತು ಎಂದರೆ ಸರಿ . ಪಂಚಾಯತ್ ಪಾಲು ಪಟ್ಟಿ ಯಲ್ಲಿ 20 ಗುಂಟೆ ರಸ್ತೆಗೆ ಹೋಗಿದೆ ಅಂತ ಬರೆಸಿಲ್ಲ ಏಕೆಂದರೆ ನನ್ನ ತಂದೆಗೆ ಅಷ್ಟು ತಿಳುವಳಿಕೆ ಇಲ್ಲ . ಪಂಚಾಯತ್ ಪಾಲು ಪಟ್ಟಿಯಲ್ಲಿ ಏನು ಬರೆದಿದೆ ಅಂತ ತಿಳಿದುಕೊಂಡು ಸಹಿ ಮಾಡುತ್ತಾರೆ ಎಂದರೆ ನನ್ನ ತಂದೆಗೆ ಅಷ್ಟೊಂದು ತಿಳುವಳಿಕೆ ಇಲ್ಲ ಅದರಲ್ಲಿ ದಾರಿ ತೆಗೆದಿದ್ದಾರೆ ಎಂದು ಹೇಳಿದ್ದಾರೆ ಅದಕ್ಕೆ ಸಹಿ ಮಾಡಿದ್ದಾರೆ . ಪಂಚಾಯತ್ ಪಾಲು ಪಟ್ಟಿ ಪ್ರಕಾರ ನನ್ನ ತಂದೆಗೆ ಹೆಸರಿಗೆ ಆಸ್ತಿ ವರ್ಗಾವಣೆ ಆಗಿದೆ ಎಂದರೆ ಸರಿ . ನಾವು ಎಂ ಆರ್ ನೋಡಿದ ನಂತರ ಪಂಚಾಯತ್ ಪಾಲು ಪಟ್ಟಿ ಪ್ರಶ್ನಿಸಿ ಎಲ್ಲಿಯೂ ಅರ್ಜಿ ಸಲ್ಲಿಸಿಲ್ಲ . ಅದನ್ನು ರದ್ದು ಗೊತಿಸುವಂತೆ

ನ್ಯಾಯಾಲಯಕ್ಕೆ ದಾವೆ ಮಾಡಿಲ್ಲ . ನಾವೇ ಒತ್ತುವರಿ ಮಾಡಿದ್ದೇವೆ ಅಂತ ಸರ್ವೆ ಯವರು ಅಳತೆ ಮಾಡಿ ವರದಿಯನ್ನು ಸಲ್ಲಿಸಿದ್ದಾರೆ ಎಂದರೆ ನಾವು 5 ಎಕರೆ 20 ಗುಂಟೆ ಯಲ್ಲಿ ಸ್ವಾಧೀನದಲ್ಲಿ ಇಲ್ಲ 5 ಎಕರೆ 10 ಗುಂಟೆ ಯಲ್ಲಿ ಇದ್ದೇವೆ ನಮಗೆ 10 ಗುಂಟೆ ಕಡಿಮೆ ಆಗಿದೆ ಎಂದು ಹೇಳುತ್ತಾರೆ . ಈಗಲೂ ನ್ಯಾಯಾಲಯದಿಂದ ಕಮೀಷನರ್ ನೇಮಕ ಮಾಡಿ ಅಳತೆ ಮಾಡಿಸಿದರೆ ಒಪ್ಪುತ್ತೇನೆ ಆದರೆ ದಾರಿ ಜಾಗವನ್ನು ತಗೆಯಬೇಕು ಎಂದು ಹೇಳುತ್ತಾರೆ . ಪಾಲು ಪಟ್ಟಿಯಲ್ಲಿ ದಾರಿಯನ್ನು ತೆಗೆದಿಲ್ಲ . ನಾವು ವಾದಿಯ ಮಾಲಿಕತ್ವವನ್ನು ಅಲ್ಲಗಳೆಯುತ್ತೇವೆ ಎಂದರೆ ಸರಿಯಲ್ಲ . ಈ ಹಿಂದೆಯೂ ಕೂಡ ವಾದಿಯವರು ಜಮೀನನ್ನು ಒತ್ತುವರಿ ಮಾಡಿದ್ದೇವೆ ಎಂದರೆ ಸರಿಯಲ್ಲ . ಅವರ ಹೆಂಗಸು ಬಂದು ನಮ್ಮನ್ನು ಪ್ರಶ್ನಿಸಿದ್ದಾರೆ ಎಂದರೆ ಸರಿಯಲ್ಲ . ಚೇಳೂರು ಪೋಲಿಸ್ ಠಾಣೆಯಲ್ಲಿ ಎರಡು ಬಾರಿ ದೂರು ಕೊಟ್ಟಿದ್ದಾರೆ ಎಂದರೆ ಹೌದು ನಮ್ಮನ್ನು ಹೆದರಿಸಲು ಕೊಟ್ಟಿದ್ದಾರೆ ಎಂದು ಹೇಳುತ್ತಾರೆ .

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.

sd/-
(ಉಂಡಿ ಮಂಜುಳ ಶಿವಪ್ಪ )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ಼ಸಿ, ಗುಬ್ಬಿ.